ನೂರೊಂದು ಜನ ಹೇಳಬಹುದು. ಅದು ಅಪರಾಧ, ಹಾಗಾಗಿ ಬದುಕಿ, ಹೋರಾಡಿ, ಬದುಕು ಮುಖ್ಯ ಅಂತ. ಆದರೆ ಹೇಳಿದಷ್ಟು ಸುಲಭ ಅಲ್ಲ. ಹಾಗೇನೆ ಆತ್ಮಹತ್ಯೆ ಮಾಡಿಕೊಳ್ಳೋದೂ ಹೇಳಿದಷ್ಟು ಸುಲಭ ಅಲ್ಲ. ಅತ್ಯಂತ ಸಂಕೀರ್ಣವಾದ ಸಮಸ್ಯೆ. 'ಸಂದರ್ಶನ' ಅಂದರೆ ಆತ್ಮ ಸತ್ಯವನ್ನು ಹೊರಗೆ ಹಾಕುವುದು ಅಂತ. ನನ್ನ ಭಾಷಾ ಪ್ರೌಢಿಮೆ ತೋರಿಸೋದು ಅಲ್ಲ. ಆದ್ದರಿಂದ ಹೇಳ್ತೇನೆ, ನನಗೆ ಮತ್ತೆ ಮತ್ತೆ ತೀವ್ರವಾಗಿ ಬಂದಿದೆ. ಕನಿಷ್ಠ ಇಪ್ಪತ್ತು ಬಾರಿಯಾದರೂ ನನಗೆ ಅನ್ನಿಸಿದೆ. ಯಾಕೆ ಮಾಡಿಕೊಳ್ಳಲಿಲ್ಲ? ಆದರ್ಶ ಅಲ್ಲ, ಅಪರಾಧ ಅನ್ನೋ ಮಾತಲ್ಲ. ಅದಕ್ಕೆ ಕಾರಣ, ಮತ್ತೆ ಮಾಡಿಕೊಳ್ಳುವ ಧೈರ್ಯ ಸಾಲದೆ. ಒಂದು ಸಲ ಮಾಡಿಕೊಂಡೆ, ಕಾಲು ಊನ ಆಯಿತು. ಮತ್ತೊಂದು ಸಲ ಪ್ರಯತ್ನಿಸಿ ವಿಫಲನಾದರೆ ಮತ್ತೇನಾಗುವುದೋ? ಆಗ ಬದುಕು ಹೇಗೋ? ಮತ್ತೆ ವಿಫಲನಾಗಿ ಬದುಕನ್ನು ಎದುರುಗೊಳ್ಳುವ ಧೈರ್ಯವಿಲ್ಲದಿರುವುದರಿಂದ ನನಗೆ ಆ ಪ್ರಯತ್ನ ಮಾಡಲಾಗಲಿಲ್ಲ.

ಎತ್ತು ಒಂಟಿಯಾದರೂನು ಜೋಡಿಯಾದರೂನು ಬಂಡಿ ಎಳೀಲೇ ಬೇಕಲ್ವ. ಒಂಟಿ ಆದ್ರೆ ಒಂದೆರಡು ಮೂಟೆ ಕಮ್ಮಿ ಆಗಬಹುದು; ಅಷ್ಟೆ. ಕೈವಾರ ತಾತಯ್ಯ ಹೇಳ್ತಾರೆ – 'ಬಾರಯ್ಯ ಗೋವಿಂದ ಬಂಧಕವ ಬಿಡಿಸು, ದೇಹವೆಂಬ ಬಂಡಿಯ ಎಳೆದು ಬಳಲಿದೆನು' ಅಂತ. ಅಲ್ವ? ಬಳಲಿಲ್ಲ ನಾನು. ಯಾವಾಗ ಬಳಲ್ತೀನಿ ಅಂತಾನೂ ಗೊತ್ತಿಲ್ಲ. ಬಳಲಿ ನಿಷ್ಕ್ರಿಯನಾಗುವ ಬದಲು ಸಾವು ಸಕ್ರಿಯಗೊಳ್ಳಲಿ ಅಂತ. ಇದನ್ನ ನೀವು ಜೀವವಿರೋಧಿ ನಿಲುವು ಅನ್ನಬಹುದು. ನಿಷ್ಕ್ರಿಯತೆ ಅನ್ನೋದೂ ಸಾವೇ ಅಲ್ಲವೆ? ನನ್ನ ಆಶಯ ಇಷ್ಟೆ – ನಿರಂತರ ಆರೋಗ್ಯ, ಅನಾಯಾಸ ಮರಣ. ಇದು ನಾಳೆಯೇ ಬರಲಿ ನನ್ನ ಸ್ವಾಗತವಿದೆ. ನರಕದ ಭಯವಿಲ್ಲ, ಸ್ವರ್ಗದ ಆಸೆ ಇಲ್ಲ. ಹೀಗಿರೋದರಿಂದ ನಾನು ಚಟುವಟಿಕೆಯಿಂದ ಇದ್ದೇನೆ.

◆ **ಮೊರಸುನಾಡಿನ ಜಾನಪದ–ತತ್ವಪದಗಳ ಹಲವು ದಾರಿಗಳು ನಮ್ಮ ಮುಂದಿವೆ. ಶ್ರೀಮಂತವಾದ ಮೌಖಿಕ ಪರಂಪರೆ ಮತ್ತು ಐತಿಹ್ಯಗಳು ವಿಪುಲವಾಗಿ ಸಿಗುತ್ತವೆ. ಜನಪದ ರಾಮಾಯಣ, ಮಹಾಭಾರತಗಳ ಜೊತೆಗೆ ಕೈವಾರ, ಸೀತಿ ಬೆಟ್ಟ, ಆವನಿ ಬೆಟ್ಟಗಳಂಥ ಸ್ಥಳಗಳಲ್ಲಿ ಪುರಾಣಗಳಿಗೆ ಸಂಬಂಧಪಟ್ಟ ಐತಿಹ್ಯಗಳು ಇವೆ. ಇದರ ಬಗ್ಗೆ ವಿವರಿಸಿ.**

ಒಂದು ಬಹುದೊಡ್ಡ ಪ್ರದೇಶದಲ್ಲಿ ಇರಬೇಕಾದಂತಹ ಧಾರ್ಮಿಕ, ಸಾಮಾಜಿಕ (ಧರ್ಮೋಸಾಮಾಜಿಕ) ಕ್ಷೇತ್ರಗಳು ನಮ್ಮ ಮೊರಸುನಾಡು ಪ್ರದೇಶದಲ್ಲಿ ಬಹಳಷ್ಟಿವೆ. ಚೋಳರ ಕಾಲದಲ್ಲಿ ಹೊಸೂರನ್ನು ಮೊರಸುನಾಡು ಅಂತ ಕರೆದರು. ಆದರೆ ಸಾಂಸ್ಕೃತಿಕವಾಗಿ, ಭಾಷಿಕವಾಗಿ ಮೊರಸುನಾಡಿನ ರಾಜಧಾನಿ ಕೋಲಾರವೆ. ಕೆ.ಜಿ.ಎಫ್.ನಲ್ಲಿ ನಯಾಂಡಿ ನೃತ್ಯ, ಕಾವಡಿ ಕುಣಿತ. ಶ್ರೀನಿವಾಸಪುರ–ಚಿಂತಾಮಣಿ ಕಡೆಗೆ ಹೋದರೆ ಜಡೆ ಕೋಲಾಟ, ಗಂಗೆತ್ತು, ಬುಡಬುಡಕೆ, ಗೊಬ್ಬಿಳ್ಳು, ಆಸಾದಿ. ಚಿಕ್ಕಬಳ್ಳಾಪುರ ಕಡೆಗೆ ಹೋದರೆ ಮುಖವೀಣೆ, ಕೈವಾರ ತಾತಯ್ಯ. ಇಲ್ಲಿ ತೊಗಲುಗೊಂಬೆ ಪ್ರಾರಂಭ ಆಗುವುದಕ್ಕೆ ಕಾರಣವೆ ಬಾಗೇಪಲ್ಲಿಯಲ್ಲಿದ್ದಂತಹ ಒಂದು ಖಂಡೆ ವಂಶ. ಆಮೇಲೆ ಲೇಪಾಕ್ಷಿಯಿಂದ ಅನೇಕ ತೊಗಲುಗೊಂಬೆ ಕುಟುಂಬಗಳು ಬಂದದ್ದು ಇಲ್ಲಿಗೇನೆ. ಅದಕ್ಕಾಗೆ ಒಂದು ಬೊಮ್ಮಲಾಟಪುರ ಅಂತಾಯಿತು. ಅಂದರೆ ಮೊರಸುನಾಡು ಹಲವು ಭಾಷೆಗಳ ಸಮ್ಮಿಲಿತ ಪ್ರದೇಶ ಮಾತ್ರ ಅಲ್ಲ, ಹಲವು ಕಲೆಗಳ ನೆಲೆಬೀಡು. ಹಾಗಾಗಿ ಕೋಲಾರ ಇವತ್ತು ನನಗೆ ಬಹುದೊಡ್ಡ ಸಾಂಸ್ಕೃತಿಕ ಕೇಂದ್ರ. ತಮಟೆ ಕಲಾವಿದ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ನಮ್ಮ ನೆಲದವರು. ಕೋನಂಗಿ ಕಲೆ ಉಳಿದುಕೊಂಡಿದ್ದುದು ಕೋಲಾರದಲ್ಲೇ. ಅದರ ಕೊನೇ ಕೊಂಡಿ ಕೋನಂಗಿ ಹನುಮಪ್ಪ ಈಗಿಲ್ಲ. ಜೋಂಕಣಿ ಕಲೆಯನ್ನ ಉಳಿಸಿಕೊಂಡ ಜೋಂಕಣಿ ಮುನಿಯಪ್ಪ ಬೈಕೊತ್ತೂರಿನವನು. ಇಲ್ಲಿ ಪ್ರತಿಯೊಬ್ಬನೂ ಜಾನಪದ ಗಾಯಕನೆ. ಮಾನಿಪನಿ ಮುನೆಪ್ಪ ಅಂತ ಶ್ರೀನಿವಾಸಪುರ ತಾಲ್ಲೂಕಿನ ಚಿಂತಪಲ್ಲಿಯವನು. ಆ ಮನುಷ್ಯ ಹೆಂಗೆ ಬದುಕಿದ ಅಂತಂದ್ರೆ ನಿದ್ದೆ ಮಾಡುವ ಸಮಯವನ್ನು ಬಿಟ್ಟು ಮಿಕ್ಕೆಲ್ಲಾ ಸಮಯದಲ್ಲಿ ಕೇಳಿಕೆ ಪದಗಳನ್ನು ಹಾಡಿಕೊಂಡೆ ಓಡಾಡ್ತಿದ್ದ. ಚೆಂಚುಲಕ್ಷ್ಮಿ, ವಿರಾಟಪರ್ವ, ಸಾಸಲು ಚಿನ್ನಮ್ಮ, ಬಾಲನಾಗಮ್ಮ, ದೇಸಂಗಿರಾಜು ಕತ... ಇವೆಲ್ಲಾ ಕೇಳಿಕೆಗಳು ನಮ್ಮ ಕೋಲಾರದಲ್ಲೇ ಮೆರೆದು ಬಂದಿರೋದು. ಇವನ್ನ ತೆಲುಗಲ್ಲಿ 'ಪದ್ಯನಾಟಕಗಳು' ಅಂತಾರೆ. ಈ ಕೇಳಿಕೆಗಳು